# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2759 |
| ಮಾನ್ಯ ಸದಸ್ಯರ ಹೆಸರು | : | ಡಾ: ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28/03/2022 |
| ಉತ್ತರಿಸುವ ಸಚಿವರು | : | ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸರ್ಕಾರ ಕೈಗೊಂಡ ಕ್ರಮವೇನು; | ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಪ್ರವಾಸೋದ್ಯಮ ನೀತಿ 2020-26ರಲ್ಲಿ ರಾಜ್ಯಾದ್ಯಂತ ಗುರುತಿಸಿರುವ ಆದ್ಯತಾ ಪ್ರವಾಸಿ ತಾಣಗಳ ಪೈಕಿ ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳ ಈ ಕೆಳಕಂಡ ಪ್ರವಾಸಿ ತಾಣಗಳನ್ನು ಆದ್ಯತಾ ಪ್ರವಾಸಿ ತಾಣಗಳಾಗಿ ಮತ್ತು ಸದರಿ ಜಿಲ್ಲೆಗಳಲ್ಲಿ 55 ಪ್ರವಾಸಿ ತಾಣಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.<br>1. ಕಲಬುರಗಿ – ಚಿಂಚೋಲಿ, ಗಂಗಾಪುರ, ಕಲಬುರಗಿ, ಮಾಳಖೇಡ ಮತ್ತು ಸನ್ನತಿ<br>2. ಬೀದರ್ - ಬೀದರ್ ಮತ್ತು ಬಸವಕಲ್ಯಾಣ.<br>3. ಯಾದಗಿರಿ – ಸುರಪುರ ಮತ್ತು ಯಾದಗಿರಿ.<br>ಪ್ರವಾಸೋದ್ಯಮ ನೀತಿ 2020-26ರ ಅಡಿ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಗುರುತಿಸಿರುವ ಆದ್ಯತಾ ಪ್ರವಾಸಿ ತಾಣಗಳಲ್ಲಿ ಬಂಡವಾಳ ಹೂಡಿಕೆ ಮಾಡಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ಉತ್ತೇಜಿಸಲು ಸಹಾಯಧನ, ಪ್ರೋತ್ಸಾಹಕಗಳು ಹಾಗೂ ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.<br>ಕರ್ನಾಟಕ ಪ್ರವಾಸೋದ್ಯಮವನ್ನು ಜಿಲ್ಲಾ ಮಟ್ಟದಲ್ಲಿ ಉತ್ತೇಜಿಸಲು ಹಾಗೂ ಪ್ರಚಾರಪಡಿಸಲು ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಿಗೆ 2013ನೇ ಸಾಲಿನಿಂದ ಇದುವರೆವಿಗೂ ತಲಾ ರೂ.70.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಅದರಂತೆ ಪ್ರಸ್ತುತ ಸಾಲಿನಲ್ಲಿಯೂ ತಲಾ ರೂ.20.00 ಲಕ್ಷಗಳನ್ನು ಕಲಬುರಗಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಗೆ ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ನಿಗಮದ ಮೂಲಕ ಅನುದಾನ ಬಿಡುಗಡೆ ಮಾಡಲಾಗಿದೆ. |
| ಆ) | ಹೊಸ ಯೋಜನೆಗಳನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಹಾಗಿದ್ದಲ್ಲಿ, ವಿವರ ಒದಗಿಸುವುದು.) | ಮಾನ್ಯ ಮುಖ್ಯಮಂತ್ರಿಗಳ 2022-23ರ ಆಯವ್ಯಯ ಘೋಷಣೆಯಲ್ಲಿ ಕೆಳಕಂಡ ಯೋಜನೆಗಳನ್ನು ಘೋಷಿಸಲಾಗಿದೆ.<br>1. ಪಾರಂಪರಿಕ ಪ್ರವಾಸಿ ತಾಣಗಳಾದ ಬೀದರ್ ಹಾಗೂ ಕಲಬುರಗಿ ಕೋಟೆಗಳಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (Archeological Survey of India) ಯ ಸಹಯೋಗದೊಂದಿಗೆ ಪುನರುಜ್ಜೀವನಗೊಳಿಸಲು ಉದ್ದೇಶಿಸಲಾಗಿರುತ್ತದೆ.<br>2. ರಾಜ್ಯದ ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ "Adopt a Monument" ಯೋಜನೆ ಮೂಲಕ ದತ್ತು ಪಡೆಯಲು ಅವಕಾಶ ಕಲ್ಪಿಸಲಾಗುವುದು. |

ಸಂಖ್ಯೆ: ಟಿಓಆರ್ 181 ಟಿಡಿವಿ 2022

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಮತ್ತು ಪರಿಸರ ಸಚಿವರು

ಅನುಬಂಧ-1

## ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ 2020-25 ರ ಕರ್ನಾಟಕ ಪ್ರವಾಸೋದ್ಯಮ ನೀತಿಯಡಿ ಗುರುತಿಸಿರುವ ಪ್ರವಾಸಿ ತಾಣಗಳ ವಿವರ

| ಕ್ರ.ಸಂ | ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು | ಪ್ರವಾಸಿ ತಾಣಗಳ ಸಂಖ್ಯೆ |
|---|---|---|---|---|
| 1 | ಕಲಬುರಗಿ | ಕಲಬುರಗಿ | ಕಲಬುರಗಿ ಕೋಟೆ, ಶೋರ್ (ಚೋರ್) ಗುಂಬಜ್, ಹಫ್ತ್ ಗುಂಬಜ್, ಬುದ್ಧ ವಿಹಾರ, ಹೋಳಗುಂಡಾ, ಫಿರೋಜಾಬಾದ್, ಸನ್ನತಿ. | 7 |
| | | ಆಳಂದ | ನರೋಣಾ, ಅಮರ್ಜಾ ಜಲಾಶಯ, ಹೆಬಳಿ. | 3 |
| | | ಅಫಜಲ್ ಪೂರ | ಗಾಣಗಾಪುರ<br>ಘತ್ತರಗಿ, ಮಣ್ಣೂರ. | 3 |
| | | ಸೇಡಂ | ಮಳಖೇಡ ಕೋಟೆ<br>ಮೋತಕಪಲ್ಲಿ, ಯಾನಾಗುಂದಿ, ಬಿಜ್ಜನಳ್ಳಿ. | 4 |
| | | ಚಿಂಚೋಳಿ | ಚಂದ್ರಂಪಳ್ಳಿ ಆಣೆಕಟ್ಟು<br>ಎತ್ತಿಪೋತೆ ಜಲಪಾತ, ಪಂಚಲಿಂಗೇಶ್ವರ ಬುಗ್ಗಿ,<br>ಗೊಟ್ಟಂಗೊಟ್ಟ, ಮೋಘಾ. | 5 |
| | | ಜೇವರ್ಗಿ | ಮಳಗೇರಿ, ಯಡ್ರಾಮಿ ರಾಮತೀರ್ಥ. | 2 |
| | | ಚಿತ್ತಾಪೂರ | ಕಾಳಗಿ, ಛಾಯಾಭಗವತಿ, ಸನ್ನತಿ.<br>ಕನಗನಹಳ್ಳಿ, ನಾಗಾವಿ, ದಿಗ್ಗಾವಿ, ರಟ್ಕಲ್ (ರಟಕಲ್),<br>ಕೋರವಾರ. | 8 |
| 2 | ಬೀದರ್ | ಬೀದರ್ | ಬೀದರ್ ಕೋಟೆ, ಪಾಪನಾಶಿನಿ.<br>ಚೌಕಂಡಿ ಮತ್ತು ಬಹಮನಿ ಸುಲ್ತಾನರ ಟೂಂಬ್ಸ್, ಕರೇಜ್. | 4 |
| | | ಹುಮನಾಬಾದ | ಜಲಸಂಗಿ. | 1 |
| | | ಬಸವ ಕಲ್ಯಾಣ | ಅನುಭವ ಮಂಟಪ, ನಾರಾಯಣಪುರ.<br>ಭಾತಂಬ್ರಾ ಕೋಟೆ | 3 |
| | | ಭಾಲ್ಕಿ | ಕಾರಂಜ ಜಲಾಶಯ | 1 |
| 3 | ಯಾದಗಿರಿ | ಯಾದಗಿರಿ | ಯಾದಗಿರಿ ಕೋಟೆ, ಸಣ್ಣಕೆರೆ<br>ದಬೆದಬೆ ಫಾಲ್ಸ್ (ಗುರಮಿಠಕಲ), ಹತ್ತಿಕುಣಿ ಆಣೆಕಟ್ಟು. | 4 |
| | | ಶಹಾಪುರ | ಮಲಗಿದ ಬುದ್ಧ (ಸ್ಲೀಪಿಂಗ್ ಬುದ್ಧ)<br>ಭೀಮರಾಯನಗುಡಿ, ಸಂಗಮ (ಕೃಷ್ಣಾ ಮತ್ತು ಭೀಮಾ ನದಿಗಳ ಸಂಗಮ), ಶಿರವಾಳ, ವನದುರ್ಗ ಕೋಟೆ. | 5 |
| | | ಸುರಪುರ | ನಾರಾಯಣಪುರ ಆಣೆಕಟ್ಟು, ಬೋನಾಳ ಪಕ್ಷಿಧಾಮ, ರಾಜಾ ವೆಂಕಟಪ್ಪ ನಾಯಕ ಕೋಟೆ ಮತ್ತು ಅರಮನೆ.<br>ಟೇಲರ್ ಮಂಜಿಲ್, ಏವೂರು. | 5 |
| | | | ಒಟ್ಟು | 55 |

ನಿರ್ದೇಶಕರು
ಪ್ರವಾಸೋದ್ಯಮ ಇಲಾಖೆ